# ಶ್ರೀ ವಿಜಯದಾಸರ ಕೃತಿ

ನೋಡಿದೆ ಗುರುಗಳ ನೋಡಿದೆ ॥ ಪ॥

ನೋಡಿದೆನು ಗುರುರಾಘವೇಂದ್ರ ಮಾಡಿದೆನು ಭಕುತಿಯಲಿ ವಂದನೆ।
ಬೇಡಿದೆನು ಕೊಂಡಾಡಿ ವರಗಳ ಈಡು ಇಲ್ಲದೆ ಕೊಡುವ ಗುರುಗಳ॥ ಅ.ಪ.॥

ಮೊದಲು ಗಾಂಗೇಯ ಶಯ್ಯಜನು ಈ ನದಿಯ ತೀರದಲ್ಲಿ ಯಾಗವ।
ಮುದದಿ ರಚಿಸಿ ಪೂರೈಸಿ ಪೋಗಿರಲದನು ತಮ್ಮೊಳು ತಿಳಿದು ತವಕದಿ
ಹೃದಯ ನಿರ್ಮಲ ರಾಗಿರಾಗದಿ ಬುಧಜನರ ಸಮ್ಮೇಳದಲಿ ಸಿರಿ
ಸದನ ಸಂಗ್ರಿಯ ತಿಳಿದು ನೆನೆವರ ಉದಿತ ಭಾಸ್ಕರನಂತೆ ಪೊಳೆವರ ॥ 1॥

ಅಲವಬೋಧ ಮಿಕ್ಕಾದ ಮಹನಿಗಳ ಸಾಂಶರು ಒಂದು ರೂಪದಿ
ನೆಲೆಯಾಗಿ ನಿತ್ಯದಲಿ ಇಪ್ಪರು ಒಲಿಸಿಕೊಳುತಲಿ ಹರಿಯ ಗುಣಗಳ
ತಿಳಿದು ತಿಳಿಸುವ ತಮ್ಮ ತಮಗಿಂದಧಿಕರಿಂದು ಪದೇಶ ಮಾರ್ಗದಿ
ಕಲಿಯುಗದೊಳು ಕೇವಲ ಕತ್ತಲೆಯ ಹರಿಸುವ ಸೊಬಗ ಸಂತತ ॥ 2॥

ರಾಮ ನರಹರಿ ಕೃಷ್ಣ ಕೃಷ್ಣರ ನೇಮದಿಂದೀ ಮೂರ್ತಿಗಳ ಪದ।
ತಾಮರಸ ಭಜನೆಯನು ಮಾಳ್ಪರು ಕೋಮಲಾಂಗರು ಕಠಿಣ ಪರವಾದಿ।
ಸ್ತೋಮಗಳ ಮಹಮಸ್ತಕಾದ್ರಿಗೆ ಭೂಮಿಯೊಳು ಪವಿಯೆನಿಸಿದ ಯತಿ
ಯಾಮ ಯಾಮಕೆ ಎಲ್ಲರಿಗೆ ಶುಭಕಾಮಿತಾರ್ಥವ ಕರೆವ ಗುರುಗಳು ॥ 3॥

ನೂರು ಪರ್ವತ ವರುಷ ಬಿಡದಲೆ ಚಾರು ವೃಂದಾವನದಲಿ ವಿ।
ಸ್ತಾರ ಆರಾಧನೇಯು ತೊಲಗದೆ ವಾರವಾರಕೆ ಆಗುತಿಪ್ಪುದು
ಸಾರೆ ಕಾರುಣ್ಯದಲಿ ಲಕುಮೀ ನಾರಾಯಣತಾ ಚಕ್ರರೂಪದಿ।
ಸಾರಿದವರಘ ಕಳೆದು ಇವರಿಗೆ ಕೀರುತಿಯ ತಂದಿಪ್ಪುದನು ದಿನ ॥ 4॥

ಮಿತವು ಎನದಿರಿ ಇಲ್ಲಿ ದಿನ ದಿನ ಕತಿಶಯವು ಆಗುವದು ಭೂಸುರ
ತತಿಗೆ ಭೋಜನ ಕಥಾಶ್ರವಣ ಭಾರತ ಪುರಾಣಗಳಿಂದ ಲೋಪ್ಯತ್ತ
ಕ್ಷಿತಿಯೊಳಗೆ ಮಂಚಾಲೆ ಗ್ರಾಮಕೆ ಪ್ರತಿಯು ಇಲ್ಲವೆಂದೆನಿಸಿ ಕೊಂಬುದು
ಪತಿತಪಾವನ ವಿಜಯವಿಠಲನ ತುತಿಸಿಕೊಳ್ಳುತ ಮೆರೆವ ಗುರುಗಳ ॥ 5॥